# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1142 (1167) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 18.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು. |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೋಂಪುರ-ದಾಬಸ್‌ಪೇಟೆ ಕೆ.ಐ.ಎ.ಡಿ.ಬಿ ಕೈಗಾರಿಕಾ ಪ್ರದೇಶದಲ್ಲಿ ಇಲ್ಲಿಯವರೆಗೆ ವಲಯವಾರು ಎಷ್ಟು ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ; ಅದರ ವಿಸ್ತೀರ್ಣವೆಷ್ಟು; ಈ ಪ್ರದೇಶದಲ್ಲಿ ಎಷ್ಟು ಕೈಗಾರಿಕೆಗಳಿಗೆ ಈಗಾಗಲೇ ಭೂ ಹಂಚಿಕೆ ಮಾಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು). | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನಲ್ಲಿ ದಾಬಸ್ ಪೇಟೆ ಮತ್ತು ಸೋಂಪುರದಲ್ಲಿ 05 ಕೈಗಾರಿಕಾ ಪ್ರದೇಶಗಳನ್ನು 3633.98 ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಿದ್ದು, ವಿವರಗಳನ್ನು **ಅನುಬಂಧ-1 ರಲ್ಲಿ** ಒದಗಿಸಿದೆ.<br><br>ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಒಟ್ಟು 1141 ಘಟಕಗಳಿಗೆ 2264.54 ಎಕರೆ ವಿಸ್ತೀರ್ಣದ ಜಮೀನನ್ನು ಹಂಚಿಕೆ ಮಾಡಿದ್ದು, ವಿವರಗಳನ್ನು **ಅನುಬಂಧ-2 ರಲ್ಲಿ** ಒದಗಿಸಿದೆ. |
| ಆ. | ಕೈಗಾರಿಕೆಗಳಿಗೆ ಭೂ ಹಂಚಿಕೆ ಮಾಡಲು ಸರ್ಕಾರವು ವಿಧಿಸುತ್ತಿರುವ ಷರತ್ತುಗಳೇನು; ಭೂಮಿ ಹಂಚಿಕೆಯಾದ ಎಷ್ಟು ವರ್ಷದ ಒಳಗಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು; ಈ ಕೈಗಾರಿಕಾ ಪ್ರದೇಶದಲ್ಲಿ ಸರ್ಕಾರದ ನಿಯಮಗಳಂತೆ ನಿಗಧಿತ ಅವಧಿಯೊಳಗೆ ಎಷ್ಟು ಕೈಗಾರಿಕೆಗಳು ಪ್ರಾರಂಭಿಸಿವೆ; ಅವಧಿ ಮೀರಿದ್ದರೂ ಇನ್ನೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡದೇ ಇರಲು ಕಾರಣವೇನು; (ವಿವರ ನೀಡುವುದು) | ಮಂಡಳಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲು ಇರುವ ಮಾನದಂಡಗಳನ್ನು **ಅನುಬಂಧ-3 ರಲ್ಲಿ** ಒದಗಿಸಿದೆ.<br><br>ಮಂಡಳಿಯಲ್ಲಿ ಚಾಲ್ತಿಯಲ್ಲಿರುವ ಹಂಚಿಕೆ ನಿಯಮಾವಳಿಗಳನ್ವಯ ಉದ್ದಿಮೆದಾರರು ಜಮೀನು ಹಂಚಿಕೆ ಮತ್ತು ಸ್ವಾಧೀನ ಪಡೆದು ಗುತ್ತಿಗೆ ಕರಾರು ಪತ್ರ ನೆರವೇರಿಸಿದ ದಿನಾಂಕದಿಂದ 03 ವರ್ಷಗಳ ಎಂ.ಎಸ್.ಎಂ.ಇ. ಮತ್ತು ಬೃಹತ್ ಯೋಜನೆಗಳು ಮತ್ತು 5 ವರ್ಷಗಳ (ಮೆಗಾ, ಅಲ್ಟ್ರಾ ಮೆಗಾ ಮತ್ತು ಸೂಪರ್ ಮೆಗಾ ಯೋಜನೆಗಳು) ಕಾಲಾವಕಾಶ ಇರುತ್ತದೆ. ಅಲ್ಲದೇ ಯೋಜನೆ ಅನುಷ್ಠಾನಗೊಳಿಸಲು ಹೆಚ್ಚುವರಿ 01 ವರ್ಷ ಕಾಲಾವಕಾಶವನ್ನು ಶೇ.2 ರಷ್ಟು ದಂಡ ಪಾವತಿಸಿ ಹಾಗೂ ಮತ್ತೊಂದು ವರ್ಷ ಕಾಲಾವಕಾಶವನ್ನು ಶೇ.5 ರಷ್ಟು ದಂಡ ಪಾವತಿಸಿ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆ ಪಡೆದು ಯೋಜನೆ ಅನುಷ್ಠಾನಗೊಳಿಸಿರುವ ಘಟಕಗಳ ವಿವರಗಳನ್ನು **ಅನುಬಂಧ-4 ರಲ್ಲಿ** ಒದಗಿಸಿದೆ.<br><br>ಸದರಿ ಕೈಗಾರಿಕಾ ಪ್ರದೇಶಗಳ ಪೈಕಿ ಸೋಂಪುರ 1 ಮತ್ತು 2ನೇ ಕೈಗಾರಿಕಾ ಪ್ರದೇಶಗಳಲ್ಲಿ ಹಿಂದೆ ತಿಪ್ಪಗೊಂಡನಹಳ್ಳಿ ಜಲಾನಯನ ವಲಯಕ್ಕೆ ಸಂಬಂಧಿಸಿದಂತೆ ಕೈಗಾರಿಕಾ ಪ್ರದೇಶದ ವಿನ್ಯಾಸ ನಕ್ಷೆಯನ್ನು ಪರಿಷ್ಕರಣೆ ಮಾಡಿದ್ದರಿಂದ ಹಂಚಿಕೆದಾರರು ಯೋಜನೆ |

| | | |
|---|---|---|
| | | ಅನುಷ್ಠಾನಗೊಳಿಸಲು ವಿಳಂಬವಾಗಿರುತ್ತದೆ. ಪ್ರಸ್ತುತ ಸದರಿ ಕೈಗಾರಿಕಾ ಪ್ರದೇಶದಲ್ಲಿ ಉದ್ದಿಮೆದಾರರು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುತ್ತಾರೆ.<br><br>ದಾಬಸ್ ಪೇಟೆ 4ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ಸಂಪರ್ಕ ಮತ್ತು ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ತಕರಾರು ಇದ್ದ ಕಾರಣ ಯೋಜನೆ ಅನುಷ್ಠಾನಗೊಳುಸುವಲ್ಲಿ ವಿಳಂಬವಾಗಿರುತ್ತದೆ. ಪ್ರಸ್ತುತ ಸದರಿ ಕೈಗಾರಿಕಾ ಪ್ರದೇಶದಲ್ಲಿ ಉದ್ದಿಮೆದಾರರು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುತ್ತಾರೆ. |
| ಇ. | ಭೂ ಹಂಚಿಕೆಯಾದ ಕೈಗಾರಿಕೆಗಳಿಗೆ ಯಾವ ಯಾವ ವಿವಿಧ ರಿಯಾಯಿತಿಗಳನ್ನು ನೀಡಿದೆ; ಅಂತಹ ರಿಯಾಯಿತಿ ಪಡೆದ ಕೈಗಾರಿಕೆಗಳಾವುವು; (ಸಂಪೂರ್ಣ ಮಾಹಿತಿ ನೀಡುವುದು) | ಮಂಡಳಿಯು ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಆಯಾ ಸಮಯದಲ್ಲಿ ಚಾಲ್ತಿಯಲ್ಲಿದ್ದ ರಿಯಾಯಿತಿ ದರಗಳನ್ವಯ ನಿವೇಶನ ಹಂಚಿಕೆ ಮಾಡಿರುತ್ತದೆ.<br><br>ಮಂಡಳಿಯು ದಿನಾಂಕ:01-04-2016 ರಿಂದ ದಿನಾಂಕ:01-04-2019ರ ವರೆಗೆ ಹಂಚಿಕೆ ದರದ ಶೇ.50% ರಷ್ಟು ರಿಯಾಯಿತಿ ಮತ್ತು ದಿನಾಂಕ:01-04-2019 ರಿಂದ ಇಲ್ಲಿಯವರೆಗೆ ಶೇ.75 ರಷ್ಟು ರಿಯಾಯಿತಿ ನೀಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ನಿವೇಶನ ಹಂಚಿಕೆ ಮಾಡಲಾಗಿದೆ.<br><br>ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಿರುವ ವಿವರಗಳನ್ನು **ಅನುಬಂಧ-5 ರಲ್ಲಿ** ಒದಗಿಸಿದೆ. |
| ಈ. | ಇಲ್ಲಿ ಕಾರ್ಯಾರಂಭಗೊಂಡಿರುವ ಕೈಗಾರಿಕೆಗಳಲ್ಲಿ ಇಲ್ಲಿಯವರೆಗೆ ಎಷ್ಟು ಜನ ಸ್ಥಳೀಯ ಕೌಶಲ್ಯರಹಿತ ಮತ್ತು ಕೌಶಲ್ಯಯುತ ನೌಕರರಿಗೆ ಉದ್ಯೋಗಾವಕಾಶ ನೀಡಲಾಗಿದೆ? (ಕೈಗಾರಿಕಾವಾರು ಮತ್ತು ವಲಯವಾರು ಮಾಹಿತಿಯನ್ನು ನೀಡುವುದು) | ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಡಾ: ಸರೋಜಿನಿ ಮಹಿಷಿ ವರದಿಯ ವ್ಯಾಪ್ತಿಯಲ್ಲಿ ಬರುವ ಕೈಗಾರಿಕೆಗಳಲ್ಲಿ ಇಲ್ಲಿಯವರೆಗೆ ಒಟ್ಟು 7650 ನೌಕರರು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 5441 ಕೌಶಲ್ಯ ಮತ್ತು 2209 ಕೌಶಲ್ಯರಹಿತ ನೌಕರರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ.<br><br>ವಿವರಗಳನ್ನು **ಅನುಬಂಧ-6 ರಲ್ಲಿ** ಒದಗಿಸಿದೆ. |

**(ಸಂಖ್ಯೆ: ಸಿಐ 177 ಐಎಪಿ 2025)**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅನುಬಂಧ-1

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

## ಮಂಡಳಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿರುವ ವಿವರ

### ಘೋಷ್ವಾರೆ

| ಕ್ರ. ಸಂ. | ಜಿಲ್ಲೆ | ಕೈಗಾರಿಕಾ ಪ್ರದೇಶ | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| 1 | ಬೆಂಗಳೂರು ಗ್ರಾಮಾಂತರ | ಡಾಬಸ್ ಪೇಟೆ 1ನೇ ಹಂತ | 276.55 |
| | | ಡಾಬಸ್ ಪೇಟೆ 2ನೇ ಹಂತ | 66.00 |
| | | ಸೋಂಪುರ 1 & 2ನೇ ಹಂತ (ಡಾಬಸ್ ಪೇಟೆ 3ನೇ ಹಂತ ) | 1294.00 |
| | | ಅವ್ವೇರಹಳ್ಳಿ (ಡಾಬಸ್ ಪೇಟೆ 4ನೇ ಹಂತ) | 972.43 |
| | | ಡಾಬಸ್ ಪೇಟೆ 5ನೇ ಹಂತ | 1024.91 |
| | | **ಒಟ್ಟು** | **3633.98** |

JOINT DIRECTOR
Karnataka Industrial Areas Development Board
Head Office, Bengaluru

ಅನುಬಂಧ-2

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

## ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನಲ್ಲಿ ಮಂಡಳಿಯಿಂದ ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಜಮೀನು ಹಂಚಿಕೆ ಮಾಡಿರುವ ವಿವರಗಳು

### ಘೋಷ್ವಾರೆ

| ಕ್ರ. ಸಂ. | ಜಿಲ್ಲೆ | ಕೈಗಾರಿಕಾ ಪ್ರದೇಶ | ಹಂಚಿಕೆ ಮಾಡಿರುವ ಘಟಕಗಳ ಸಂಖ್ಯೆ | ಹಂಚಿಕೆ ಮಾಡಿರುವ ವಿಸ್ತೀರ್ಣ (ಎಕರೆಗಳಲ್ಲಿ |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | ಡಾಬಸ್ ಪೇಟೆ 1 & 2ನೇ ಹಂತ | 73 | 305.40 |
| | | ಸೋಂಪುರ 1 & 2ನೇ ಹಂತ (ಡಾಬಸ್ ಪೇಟೆ 3ನೇ ಹಂತ ) | 549 | 659.37 |
| | | ಅವ್ವೇರಹಳ್ಳಿ (ಡಾಬಸ್ ಪೇಟೆ 4ನೇ ಹಂತ) | 374 | 553.81 |
| | | ಡಾಬಸ್ ಪೇಟೆ 5ನೇ ಹಂತ | 24 | 616.00 |
| | | ಡಾಬಸ್ ಪೇಟೆ 5ನೇ ಹಂತ ಉಪ ಬಡಾವಣೆ | 121 | 129.96 |
| | | **ಒಟ್ಟು** | **1141** | **2264.54** |

JOINT DIRECTOR
Karnataka Industrial Areas Development Board
Head Office, Bengaluru

## ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು

ಅನುಬಂಧ-3

## ಕೈಗಾರಿಕಾ ನಿವೇಶನಗಳ ಹಂಚಿಕೆಯ ನಿಯಮಾವಳಿಗಳು

ಕೈಗಾರಿಕಾ ಉದ್ದೇಶಿತ ಯೋಜನೆಗಳಿಗೆ ಸರ್ಕಾರವು ಭೂಮಿಯನ್ನು ಕೆಐಎಡಿಬಿ ಮೂಲಕ ಕೈಗಾರಿಕೆಗಳಿಗೆ ಹಂಚಿಕೆ ಮಾಡಲು ಈ ಕೆಳಕಂಡ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದ ನಂತರ, ನಿಗದಿತ ಅರ್ಜಿ ನಮೂನೆಯೊಂದಿಗೆ ಮಂಡಳಿಯ ಕೇಂದ್ರ ಕಛೇರಿಗಳಿಗೆ/ ವಲಯ ಕಛೇರಿಗಳಿಗೆ ನಿವೇಶನ ಹಂಚಿಕೆಗಾಗಿ ಅರ್ಜಿಗಳನ್ನು ಸಲ್ಲಿಸಬೇಕಾಗುವುದು.

| | |
|---|---|
| ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿನ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡುವ ಸಮಿತಿ. | ರೂ. 500 ಕೋಟಿಗಳಿಗೂ ಮೀರಿದ ಬಂಡವಾಳ ಹೂಡಿಕೆಯ ಯೋಜನೆಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು. |
| ಕರ್ನಾಟಕ ಸರ್ಕಾರದ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಮಂತ್ರಿಗಳ ಅಧ್ಯಕ್ಷತೆಯಲ್ಲಿನ ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ನೀಡುವ ಸಮಿತಿ. | ರಾಜ್ಯದಲ್ಲಿ ರೂ. 15 ಕೋಟಿಗಳಿಗಿಂತ ಹೆಚ್ಚಿನ ಮತ್ತು ರೂ. 500 ಕೋಟಿಗಳ ಒಳಗಿನ ಬಂಡವಾಳ ಹೂಡಿಕೆಯ ಕೈಗಾರಿಕಾ ಯೋಜನೆಗಳನ್ನು ಪರಿಶೀಲಿಸಿ. ಅನುಮೋದನೆ ನೀಡಲಾಗುವುದು. |
| ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ. | ರೂ.15 ಕೋಟಿಗಳವರೆಗೆ ಬಂಡವಾಳ ಹೂಡುವ ಸಣ್ಣ ಕೈಗಾರಿಕಾ ಘಟಕಗಳ ಅರ್ಜಿಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು. |

ನಿವೇಶನ ಕೋರಿ ನಿಗದಿತ ಅರ್ಜಿಗಳ ಜೊತೆಯಲ್ಲಿ ಈ ಕೆಳಕಂಡ ದಾಖಲೆಗಳೊಂದಿಗೆ ಕೆ.ಐ.ಎ.ಡಿ.ಬಿ. ಕಛೇರಿಗೆ ಅಥವಾ ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿಗೆ ಸಲ್ಲಿಸುವುದು. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ರಾಮನಗರ ಜಿಲ್ಲೆಗಳಲ್ಲಿನ ಕೈಗಾರಿಕಾ ಪ್ರದೇಶಗಳಿಗೆ ನಿವೇಶನ ಕೋರುವ ಅರ್ಜಿಗಳನ್ನು ಕೆ.ಐ.ಎ.ಡಿ.ಬಿ ಕೇಂದ್ರ ಕಛೇರಿ/ಕರ್ನಾಟಕ ಉದ್ಯೋಗ ಮಿತ್ರ, ಬೆಂಗಳೂರು ಇಲ್ಲಿಗೆ ಸಲ್ಲಿಸುವುದು.

JOINT DIRECTOR
Karnataka Industrial Areas Development Board
Head Office, Bengaluru

- ವಿವರವಾದ ಯೋಜನಾ ವರದಿ ದ್ವಿಪ್ರತಿಯಲ್ಲಿ
- ಸಂಘದ ವಿವರಣಾ ಪತ್ರ ಮತ್ತು ನಿಯಮಾವಳಿಗಳು/ಪಾಲುಗಾರಿಕೆ ಕರಾರು ಪತ್ರ/ ಮೆಮೊರೆಂಡಮ್ ಅಂಡ್ ಆರ್ಟಿಕಲ್ಸ್ ಆಫ್ ಅಸೋಷಿಯೇಷನ್ ಅನ್ವಯಿಸುವಂತೆ ದ್ವಿಪ್ರತಿಯಲ್ಲಿ.
- ಉದ್ಯೋಗ ಆಧಾರ್ ನೋಂದಣಿ ಪ್ರಮಾಣ ಪತ್ರ.
- ಭೂಮಿಯ ಉದ್ದೇಶಿತ ಉಪಯೋಗವನ್ನು ಸೂಚಿಸುವ ನಕ್ಷೆ.
- ಮುಂಗಡ ಠೇವಣಿಯಾಗಿ ಎಕರೆಯೊಂದಕ್ಕೆ ರೂ. 5000/-ಗಳು.
- ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ / ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ / ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಅನುಮೋದನಾ ಪತ್ರ.

**ಕೈಗಾರಿಕಾ ನಿವೇಶನಗಳ ಹಣ ಪಾವತಿಸುವ ನಿಯಮಗಳು**

| | |
|---|---|
| ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ತುಮಕೂರು, ಮೈಸೂರು, ಹಾಸನ, ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳ ನಿವೇಶನ ಬೆಲೆಯನ್ನು ಪಾವತಿಸುವ ವಿಧಾನ (ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ) | ಅ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ 30 ರಷ್ಟು ಹಣವನ್ನು ಮುಂಗಡವಾಗಿ ಪಾವತಿಸುವುದು.<br>ಆ. ನಿವೇಶನ ಹಂಚಿಕೆಯಾದ ದಿನದಿಂದ 90 ದಿನಗಳ ಒಳಗಾಗಿ ನಿವೇಶನದ ಬಾಕಿ 70% ಬೆಲೆಯನ್ನು ಪಾವತಿಸುವುದು. |
| ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶಗಳ ನಿವೇಶನ ಬೆಲೆಯನ್ನು ಪಾವತಿಸುವ ವಿಧಾನ. (ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ) | ಅ ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ 20 ರಷ್ಟು ಹಣವನ್ನು ಮುಂಗಡವಾಗಿ ಪಾವತಿಸುವುದು.<br>ಆ ನಿವೇಶನ ಹಂಚಿಕೆಯಾದ ದಿನದಿಂದ 90 ದಿನಗಳ' ಒಳಗಾಗಿ ನಿವೇಶನದ ಬಾಕಿ 80% ಬೆಲೆಯನ್ನು ಪಾವತಿಸುವುದು. |

| | |
|---|---|
| ಮಹಿಳಾ ಉದ್ದಿಮೆದಾರರು ನಿವೇಶನದ ಬೆಲೆಯನ್ನು ಪಾವತಿಸುವ ವಿಧಾನ. | ಅ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ. 10 ರಷ್ಟು ಮೊತ್ತವನ್ನು ಮುಂಗಡ ಠೇವಣಿಯಾಗಿ ಅರ್ಜಿಯ ಜೊತೆ ಪಾವತಿಸುವುದು.<br>ಆ. ನಿವೇಶನ ಹಂಚಿಕೆಯಾದ ದಿನದಿಂದ 180 ದಿನಗಳ ಒಳಗಾಗಿ ನಿವೇಶನದ ಬಾಕಿ 90% ಬೆಲೆಯನ್ನು ಪಾವತಿಸುವುದು. |
| ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಅಂಗವಿಕಲ ಉದ್ದಿಮೆದಾರರು ಮತ್ತು ಮಾಜಿ ಸೈನಿಕರು ನಿವೇಶನದ ಬೆಲೆಯನ್ನು ಪಾವತಿಸುವ ವಿಧಾನ. | ಇ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ. 20/30 ರಷ್ಟು ಮೊತ್ತವನ್ನು ಮುಂಗಡ ಠೇವಣಿಯಾಗಿ ಅರ್ಜಿಯ ಜೊತೆ ಪಾವತಿಸುವುದು.<br>ಈ. ನಿವೇಶನ ಹಂಚಿಕೆಯಾದ ದಿನದಿಂದ 6 ಸಮ ತ್ರೈಮಾಸಿಕ ಕಂತುಗಳಲ್ಲಿ ನಿವೇಶನದ ಬಾಕಿ ಶೇ.80/70 ಬೆಲೆಯನ್ನು ಪಾವತಿಸುವುದು. |
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರು | ಉ. ಮಂಡಳಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುವ ಜಮೀನಿನ ಹಂಚಿಕೆ ದರದಲ್ಲಿ ಶೇ.75ರ ರಿಯಾಯಿತಿಯನ್ನು ನೀಡಲಾಗುವುದು ಮತ್ತು ಈ ಮೊತ್ತವನ್ನು ಸರ್ಕಾರದಿಂದ SCP/TSP ಯೋಜನೆಯಡಿ ಬಿಡುಗಡೆಯಾಗುವ ಅನುದಾನದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.<br>ಊ. ಮಂಡಳಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಂದ ನಿವೇಶನ ಹಂಚಿಕೆ ದರದ ಮೇಲೆ ಶೇ.10ರ ಹಣವನ್ನು ಅರ್ಜಿಯ ಜೊತೆಗೆ ಪ್ರಾರಂಭಿಕ ಠೇವಣಿಯನ್ನಾಗಿ ಪಾವತಿಸಿಕೊಂಡು ಹಂಚಿಕೆ ಪತ್ರ ನೀಡುವುದು ಮತ್ತು ಸ್ವಾಧೀನ ಪತ್ರ ನೀಡಿ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರವನ್ನು ನೆರವೇರಿಸಲಾಗುವುದು.<br>ಋ. ನಿವೇಶನ ಹಂಚಿಕೆ ದರದ ಬಾಕಿ ಶೇ. 15 ರ ಹಣವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ಶೇ.10 ರಷ್ಟು ಬಡ್ಡಿಯೊಂದಿಗೆ ಸ್ವಾಧೀನಪತ್ರ ನೀಡಿದ ದಿನಾಂಕದಿಂದ ವಸೂಲಾತಿ ಮಾಡಿಕೊಳ್ಳುವುದು ಮತ್ತು ಸದರಿ ಮೊತ್ತವನ್ನು ನಿಗದಿತ ಅವಧಿಯಲ್ಲಿ |

| | |
|---|---|
| | ಪಾವತಿಸುವ ಕುರಿತು ಉದ್ದಿಮೆದಾರರಿಂದ ಸೂಕ್ತ ಮುಚ್ಚಳಿಕೆ ಪತ್ರ ಪಡೆದುಕೊಳ್ಳಲಾಗುವುದು. |

ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ ಹಂಚಿಕೆಯಾದ ನಿವೇಶನದ ಪೂರ್ಣ ಮೊತ್ತವನ್ನು ಪಾವತಿಸಿದ ನಂತರ ಹಂಚಿಕೆಯ ದೃಢೀಕರಣದ ಪತ್ರವನ್ನು ನೀಡಿ ನಿವೇಶನದ ಸ್ವಾಧೀನ ಪತ್ರ ನೀಡಲಾಗುವುದು. ನಂತರ ಗುತ್ತಿಗೆ ಕರಾರು ಪತ್ರವನ್ನು ನೆರವೇರಿಸಲಾಗುವುದು. (10 ವರ್ಷ ಗುತ್ತಿಗೆ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗುವುದು).

ಅನುಬಂಧ-4

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

## ಮಂಡಳಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನಲ್ಲಿ ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಜಮೀನು ಹಂಚಿಕೆ ಪಡೆದು ಯೋಜನೆ ಅನುಷ್ಠಾನಗೊಳಿಸಿರುವ ಘಟಕಗಳ ವಿವರಗಳು

### ಘೋಷ್ವಾರೆ

| ಕ್ರ. ಸಂ. | ಜಿಲ್ಲೆ | ಕೈಗಾರಿಕಾ ಪ್ರದೇಶ | ಯೋಜನೆ ಅನುಷ್ಠಾನಗೊಳಿಸಿರುವ ಘಕಟಗಳ ಸಂಖ್ಯೆ |
|---|---|---|---|
| 1 | ಬೆಂಗಳೂರು ಗ್ರಾಮಾಂತರ | ಡಾಬಸ್ ಪೇಟೆ 1 & 2ನೇ ಹಂತ | 68 |
| | | ಸೋಂಪುರ 1 & 2ನೇ ಹಂತ (ಡಾಬಸ್ ಪೇಟೆ 3ನೇ ಹಂತ ) | 304 |
| | | ಅವ್ವೇರಹಳ್ಳಿ (ಡಾಬಸ್ ಪೇಟೆ 4ನೇ ಹಂತ) | 42 |
| | | **ಒಟ್ಟು** | **414** |

(signature)
JOINT DIRECTOR
Karnataka Industrial Areas Development Board
Head Office, Bengaluru

ಅನುಬಂಧ-5

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

**ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕಿನಲ್ಲಿ ಮಂಡಳಿಯಿಂದ ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಉದ್ದಿಮೆದಾರರಿಗೆ ರಿಯಾಯಿತಿ ನೀಡಿ ಜಮೀನು ಹಂಚಿಕೆ ಮಾಡಿರುವ ವಿವರಗಳು**

**ಘೋಷ್ವಾರೆ**

| ಕ್ರ. ಸಂ. | ಜಿಲ್ಲೆ | ಕೈಗಾರಿಕಾ ಪ್ರದೇಶ | ಹಂಚಿಕೆ ಮಾಡಿರುವ ಘಟಕಗಳ ಸಂಖ್ಯೆ | ಹಂಚಿಕೆ ಮಾಡಿರುವ ವಿಸ್ತೀರ್ಣ (ಎಕರೆಗಳಲ್ಲಿ |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | ಸೋಂಪುರ 1 & 2ನೇ ಹಂತ (ಡಾಬಸ್ ಪೇಟೆ 3ನೇ ಹಂತ ) | 47 | 44.93 |
| | | ಅವ್ವೇರಹಳ್ಳಿ (ಡಾಬಸ್ ಪೇಟೆ 4ನೇ ಹಂತ) | 117 | 122 |
| | | ಡಾಬಸ್ ಪೇಟೆ 5ನೇ ಹಂತ ಉಪ ಬಡಾವಣೆ | 121 | 129.96 |
| | | **ಒಟ್ಟು** | **285** | **296.89** |

JOINT DIRECTOR
Karnataka Industrial Areas Development Board
Head Office, Bengaluru

ಅನುಬಂಧ - 6

ಶ್ರೀ ಎಸ್ ರವಿ ವಿಧಾನ ಸಭಾ ಸದಸ್ಯರವರ ಪ್ರಶ್ನೆ ಸಂಖ್ಯೆ LAQ- (1167 ) ಅನುಬಂಧ-1

| ಕ್ರ. ಸಂ | ಘಟಕಗಳ ಹೆಸರು ಮತ್ತು ವಿಳಾಸ | ಕೌಶಲ್ಯಯುತ | | | | ಕೌಶಲ್ಯ ರಹಿತ | | | | ಒಟ್ಟು | | | |
|---|---|---|---|---|---|---|---|---|---|---|---|---|---|
| | | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು |
| 1 | 2 | 11 | 12 | 13 | 14 | 15 | 16 | 17 | 18 | 19 | 20 | 21 | 22 |
| 1 | ಮೆ: ಇಂಡೋ ಸಿಲಿಂಡರ್ಸ್. 72/2 ಎ& ಬಿ, ಬೂದಿಹಾಳ್ ಗ್ರಾಮ, ನೆಲಮಂಗಲ ತಾಲ್ಲೂಕು. | 45 | 5 | 50 | 90% | 0 | 0 | 0 | 0% | **45** | **5** | **50** | **90%** |
| 2 | ಮೆ: ಹ್ಯಾಂಪ್ಸನ್ ಇಂಡಸ್ಟ್ರೀಸ್ ಪ್ರೈ.ಲಿ., ಸರ್ವೆ ನಂ.40/41, ತೊರಾಚಿನಕುಪ್ಪೆ ವಿಲ್ಲೇಜ್, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು. | 16 | 0 | 16 | 100% | 12 | 0 | 12 | 100% | **28** | **0** | **28** | **100%** |
| 3 | ಮೆ: ಸಿಎಂ ಎನ್ವೈರೋಸಿಸ್ಟಮ್ಸ್ ಪ್ರೈ.ಲಿ. ಪ್ಲಾಟ್ ನಂ.18 & 19, 1ನೇ ಮೈನ್, 1ನೇ ಕ್ರಾಸ್, ಕೆಐಎಡಿಬಿ ಕೈಗಾರಿಕಾ ಪ್ರದೇಶ, ದಾಬಸ್ ಪೇಟೆ, ನೆಲಮಂಗಲ ತಾಲ್ಲೂಕು. | 16 | 0 | 16 | 100% | 45 | 0 | 45 | 100% | **61** | **0** | **61** | **100%** |
| 4 | ಮೆ: ಎಂ.ವೀ ಸೋಲಾರ್ ಸಿಸ್ಟಂ ಪ್ರೈವೇಟ್ ಲಿಮಿಟೆಡ್ ನಂ. 70/3, ಕೈಗಾರಿಕಾ ಪ್ರದೇಶ, ದಾಬಸ್ ಪೇಟೆ, ಪೇಮ್ಮನಹಳ್ಳಿ, ನೆಲಮಂಗಲ ತಾಲ್ಲೂಕು | 51 | 0 | 51 | 100% | 13 | 1 | 14 | 93% | **64** | **1** | **65** | **98%** |
| 5 | ಮೆ: ಮಾಗೊಡ್ ಲೇಜರ್ ಮೆಷಿನಿಂಗ್ ಪ್ರೈವೇಟ್ ಲಿಮಿಟೆಡ್ ಸೋಂಪುರ ಕೈಗಾರಿಕಾ ಪ್ರದೇಶ, ದಾಬಸ್ ಪೇಟೆ, ನೆಲಮಂಗಲ ತಾಲ್ಲೂಕು | 54 | 0 | 54 | 100% | 2 | 0 | 2 | 100% | **56** | **0** | **56** | **100%** |

JOINT DIRECTOR
Karnataka Industrial Areas Development Board
Head Office, Bengaluru

| ಕ್ರ. ಸಂ | ಘಟಕಗಳ ಹೆಸರು ಮತ್ತು ವಿಳಾಸ | ಕೌಶಲ್ಯಯುತ | | | | ಕೌಶಲ್ಯ ರಹಿತ | | | | ಒಟ್ಟು | | | |
|---|---|---|---|---|---|---|---|---|---|---|---|---|---|
| | | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು |
| 1 | 2 | 11 | 12 | 13 | 14 | 15 | 16 | 17 | 18 | 19 | 20 | 21 | 22 |
| 6 | ಮೆ: ವಿನ್ ಟೆಕ್ ಲಿಮಿಟೆಡ್,<br>ಬೂದಿಹಾಳ್ ಗ್ರಾಮ,<br>ನೆಲಮಂಗಲ ತಾಲ್ಲೂಕು | 59 | 0 | 59 | 100% | 5 | 0 | 5 | 100% | **64** | **0** | **64** | **100%** |
| 7 | ಮೆ: ಮೈಕ್ರೊಮ್ಯಾಟಿಕ್ ಗ್ರೈಡಿಂಗ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್,<br>ಪ್ಲಾಟ್ ನಂ.5/ಎ, ಸರ್ವೆ ನಂ.74, 103,<br>ಕೆಐಎಡಿಬಿ ಕೈಗಾರಿಕಾ ಪ್ರದೇಶ,<br>1ನೇ ಹಂತ, ಸೋಂಪುರ ವಿಲೇಜ್,<br>ನೆಲಮಂಗಲ ತಾಲ್ಲೂಕು | 85 | 9 | 94 | 90% | 0 | 0 | 0 | 0% | **85** | **9** | **94** | **90%** |
| 8 | ಮೆ: ಅರ್ಗಾನಿಕಾ ಅರೊಮ್ಯಾಟಿಕ್ ಪ್ರೈವೇಟ್ ಲಿಮಿಟೆಡ್,<br>ಫ್ಯಾಕ್ಟರಿ: ಪ್ಲಾಟ್ ನಂ:4 ಎ & 5 ಬಿ<br>ದಾಬಸ್‌ಪೇಟೆ ಕೆ.ಐ.ಎ.ಡಿ.ಬಿ<br>ಕೈಗಾರಿಕಾ ಪ್ರದೇಶ,<br>ನೆಲಮಂಗಲ ತಾಲ್ಲೂಕು | 72 | 4 | 76 | 95% | 28 | 1 | 29 | 97% | **100** | **5** | **105** | **95%** |
| 9 | ಮೆ: ಡೆನ್ಸೋ ಕಿರ್ಲೋಸ್ಕರ್ ಇಂಡಿಯಾ ಪ್ರೈವೇಟ್ ಲಿ.,<br>೩೦ನೇ ಮೈಲಿ ತುಮಕೂರು ರೋಡ್, ಎನ್. ಎಚ್. ೪,<br>ವಿಶ್ವೇಶ್ವರ ಪುರ,<br>ನೆಲಮಂಗಲ ತಾಲ್ಲೂಕು. | 168 | 8 | 176 | 95% | 361 | 4 | 365 | 99% | **529** | **12** | **541** | **98%** |
| 10 | ಮೆ: ಔಟ್ ಫೈನಿ ಇಂಡಿಯಾ ಪ್ರೈ. ಲಿ.<br>ಅರಿಶಿನಕುಂಟೆ ಅಂಚೆ,<br>ನೆಲಮಂಗಲ ತಾಲ್ಲೂಕು. | 174 | 26 | 200 | 87% | 69 | 0 | 69 | 100% | **243** | **26** | **269** | **90%** |

| ಕ್ರ.ಸಂ | ಘಟಕಗಳ ಹೆಸರು ಮತ್ತು ವಿಳಾಸ | ಕೌಶಲ್ಯಯುತ | | | | ಕೌಶಲ್ಯ ರಹಿತ | | | | ಒಟ್ಟು | | | |
|---|---|---|---|---|---|---|---|---|---|---|---|---|---|
| | | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು |
| 1 | 2 | 11 | 12 | 13 | 14 | 15 | 16 | 17 | 18 | 19 | 20 | 21 | 22 |
| 11 | ಮೆ: ವಾನ್ ರೋಲ್ (ಇಂಡಿಯಾ) ಪ್ರೈ.ಲಿ. ನಂ: 15/1/2, 20/1ಬಿ, ಕೆಂಪಲಿಂಗನಹಳ್ಳಿ, ಎನ್.ಹೆಚ್. ಕುಣಿಗಲ್ ರಸ್ತೆ, ನೆಲಮಂಗಲ ತಾಲ್ಲೂಕು. ಬೆಂಗಳೂರು ಗ್ರಾಮಾಂತರ ಜಿಲ್ಲೆ | 42 | 2 | 44 | 95% | 0 | 0 | 0 | 0% | **42** | **2** | **44** | **95%** |
| 12 | ಮೆ: ವರುಣ್ ಬೆವರೇಜಸ್ ಲಿಮಿಟೆಡ್. (ಪೆಪ್ಸಿಕೊ ಇಂಡಿಯಾ ಹೋಲ್ಡಿಂಗ್ಸ್) 34ನೇ ಕೆ.ಎಂ.ಸ್ಟೋನ್, ನ್ಯಾಷನಲ್ ಹೈವೇ-4, ತೆಪ್ಪದ ಬೇಗೂರು ಹಳ್ಳಿ, ನೆಲಮಂಗಲ ತಾಲ್ಲೂಕು. | 109 | 5 | 114 | 96% | 97 | 0 | 97 | 100% | **206** | **5** | **211** | **98%** |
| 13 | ಮೆ: ವೋಲ್ವೋ ಗ್ರೂಪ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಬಸ್ ವಿಭಾಗ), ಯಲಚನಾಹಳ್ಳಿ, ತಾವರೆಕೆರೆ ಹೋಬಳಿ, ಹೊಸಕೋಟೆ ತಾಲ್ಲೂಕು | 87 | 3 | 90 | 97% | 435 | 6 | 441 | 99% | **522** | **9** | **531** | **98%** |
| 14 | ಮೆ: ಯುನೈಟೆಡ್ ಬ್ರೂವರೀಸ್ ಅಂಡ್ ಡಿಸ್ಟಿಲ್ಲೆರ್ಸ್ ಪ್ರೈ. ಲಿ., ಗಂಗದಾರನಪಾಳ್ಯ, 20ನೇ ಮೈನ್, ತುಮಕೂರು ರಸ್ತೆ, ನೆಲಮಂಗಲ ತಾಲ್ಲೂಕು. | 126 | 0 | 126 | 100% | 0 | 0 | 0 | 0% | **126** | **0** | **126** | **100%** |
| 15 | ಮೆ: ಕಮ್ ವೆಲ್ ಬಯೋ ಫಾರ್ಮ ಪ್ರೈವೆಟ್ ಲಿ. 34ನೇ ಕೆ.ಎಂ.ತುಮಕೂರು ರೋಡ್, ಟಿ.ಬೇಗೂರು, ನೆಲಮಂಗಲ ತಾ॥ | 47 | 0 | 47 | 100% | 20 | 8 | 28 | 71% | **67** | **8** | **75** | **89%** |
| 16 | ಮೆ: ಟೋಕಿಯೋ ರಿಕಾ ಮಿಂಡಾ ಇಂಡಿಯ ಪ್ರೈವೇಟ್ ಲಿಮಿಟೆಡ್, ಪ್ಲಾಟ್ ಸಂಖ್ಯೆ 365, ಡಾಬಾಸ್‌ಪೇಟ್ ಕೈಗಾರಿಕಾ ಪ್ರದೇಶ, ಸೋಂಪುರ 1ನೇ ಹಂತ, ನೆಲಮಂಗಲ ತಾಲ್ಲೂಕು. | 15 | 1 | 16 | 94% | 219 | 2 | 221 | 99% | **234** | **3** | **237** | **99%** |

| ಕ್ರ. ಸಂ | ಘಟಕಗಳ ಹೆಸರು ಮತ್ತು ವಿಳಾಸ | ಕೌಶಲ್ಯಯುತ | | | | ಕೌಶಲ್ಯ ರಹಿತ | | | | ಒಟ್ಟು | | | |
|---|---|---|---|---|---|---|---|---|---|---|---|---|---|
| | | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು |
| 1 | 2 | 11 | 12 | 13 | 14 | 15 | 16 | 17 | 18 | 19 | 20 | 21 | 22 |
| 17 | ಮ: ಫೋಸರ್ಕ್ ಕೆಮಿಕಲ್ಸ್ (ಇಂಡಿಯಾ) ಲಿಮಿಟೆಡ್ ಎನ್.ಹೆಚ್. 4, 41ನೇ ಮೈಲಿ, ಕುಲುವನ ಹಳ್ಳಿ, ಸ್ಟೋನ್. ನೆಲಮಂಗಲ ತಾಲ್ಲೂಕು. | 38 | 14 | 52 | 73% | 117 | 98 | 215 | 54% | **155** | **112** | **267** | **58%** |
| 18 | ಮ: ಕಿರ್ಲೋಸ್ಕರ್ ಎಲೆಕ್ಟ್ರಿಕಲ್ ಕಂಪನಿ (ಲ), ಗವೇನಹಳ್ಳಿ, ನೆಲಮಂಗಲ ತಾಲ್ಲೂಕು | 250 | 2 | 252 | 99% | 173 | 0 | 173 | 100% | **423** | **2** | **425** | **100%** |
| 19 | ಮ: ಸಿಲ್ವರ್ ಸ್ಪಾರ್ಕ್ ಅಪರಲ್ಸ್ (ಲ), ಘಟಕ -01 ನಂ.55, ಮಜರಾ ಹೊಸಹಳ್ಳಿ, ಕೈಗಾರಿಕಾ ವಸಾಹತು, ದೊಡ್ಡಬಳ್ಳಾಪುರ ತಾಲ್ಲೂಕು | 1702 | 0 | 1702 | 100% | 53 | 0 | 53 | 100% | **1755** | **0** | **1755** | **100%** |
| 20 | ಮ. ಸಮಿ -ಸಬಿನ್ಸ ಗ್ರೂಪ್ ಲಿಮಿಟೆಡ್, ಪ್ಲಾಟ್ ನಂ.4ಬಿ/4ಸಿ, ಕೆಐಎಡಿಬಿ, ಸೋಂಪುರ ಕೈಗಾರಿಕಾ ಪ್ರದೇಶ, ನೆಲಮಂಗಲ ತಾಲ್ಲೂಕು | 51 | 4 | 55 | 93% | 16 | 0 | 16 | 100% | **67** | **4** | **71** | **94%** |
| 21 | ಮ: ಟಾಟಾ ಗ್ಲೋಬಲ್ ಬೆವರೇಜಸ್ ಲಿ. ಸರ್ವೆ ನಂ.14/4 ಎ2, ತುಮಕೂರು ರಸ್ತೆ, ಮಲ್ಲೋನಗತ್ತಿ ಹಳ್ಳಿ, ನೆಲಮಂಗಲ ತಾಲ್ಲೂಕು | 50 | 4 | 54 | 93% | 9 | 0 | 9 | 100% | **59** | **4** | **63** | **94%** |
| 22 | ಮ: ಟೆಕ್ಸ್‌ಪೋರ್ಟ್ ಇಂಡಸ್ಟ್ರೀಸ್ ಪ್ರೈವೇಟ್ ಲಿ., ನಂ.110/2, ಮೈಲಾನಹಳ್ಳಿ ವಿಲೇಜ್, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು | 1392 | 0 | 1392 | 100% | 64 | 0 | 64 | 100% | **1456** | **0** | **1456** | **100%** |
| 23 | ಮ: ಎಬಿಬಿ ಇಂಡಿಯಾ ಲಿಮಿಟೆಡ್, ಸರ್ವೆ ನಂ.88/3 ರಿಂದ 88/6, ಬಸವನಹಳ್ಳಿ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು | 150 | 0 | 150 | 100% | 108 | 0 | 108 | 100% | **258** | **0** | **258** | **100%** |

| ಕ್ರ ಸಂ | ಘಟಕಗಳ ಹೆಸರು ಮತ್ತು ವಿಳಾಸ | ಕೌಶಲ್ಯಯುತ | | | | ಕೌಶಲ್ಯ ರಹಿತ | | | | ಒಟ್ಟು | | | |
|---|---|---|---|---|---|---|---|---|---|---|---|---|---|
| | | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು | ಕನ್ನಡಿಗರು | ಇತರೆ | ಒಟ್ಟು | % ಕನ್ನಡಿಗರು |
| 1 | 2 | 11 | 12 | 13 | 14 | 15 | 16 | 17 | 18 | 19 | 20 | 21 | 22 |
| 24 | ಮೆ: ರಸಿಫಾರ್ಮ್ ಫಾರ್ಮ ಸರ್ವೀಸಸ್ ಪ್ರೈ.ಲಿ., 34ನೇ ಕೆ.ಎಂ., ಟಿ.ಬೇಗೂರು, ನೆಲಮಂಗಲ ತಾ॥ | 406 | 0 | 406 | 100% | 107 | 39 | 146 | 73% | **513** | **39** | **552** | **93%** |
| 25 | ಮೆ: ಶಿಲ್ಪಾ ಮೆಡಿಕೇರ್ ಲಿಮಿಟೆಡ್ ಪ್ಲಾಟ್ ನಂ.29, ಎಸ, 4ನೇ ಹಂತ, ಅವ್ವೇರಹಳ್ಳಿ, ಸೋಂಪುರ ಕೈಗಾರಿಕಾ ಪ್ರದೇಶ, ದಾಬಸ್‌ಪೇಟೆ, ನೆಲಮಂಗಲ ತಾಲ್ಲೂಕು. | 96 | 25 | 121 | 79% | 39 | 0 | 39 | 100% | **135** | **25** | **160** | **84%** |
| 26 | ಮೆ: ಪವರಿಕಾ ಲಿಮಿಟೆಡ್, ಅ.31ನೇ ಕಿ.ಮೀ, ತುಮಕೂರು ರಸ್ತೆ, ಬೊಮ್ಮನ ಹಳ್ಳಿ, ನೆಲಮಂಗಲ ತಾ-562123. | 27 | 1 | 28 | 96% | 58 | 0 | 58 | 100% | **85** | **1** | **86** | **99%** |
| **ಒಟ್ಟು** | | **5328** | **113** | **5441** | **24.716** | **2050** | **159** | **2209** | **20.857** | **7378** | **272** | **7650** | **96%** |

ಜಂಟಿ ನಿರ್ದೇಶಕರು
ಜಿಲ್ಲಾ ಕೈಗಾರಿಕಾ ಕೇಂದ್ರ
ಬೆಂಗಳೂರು (ಗ್ರಾಮಾಂತರ ಜಿಲ್ಲೆ)